ಡಿ. ಸತ್ಯಪ್ರಕಾಶ್ ಅವರ ತಂಡವು ಸಣ್ಣ ಸಣ್ಣ ಕಾಮಿಡಿ ವಿಡಿಯೊಗಳನ್ನು ಶೂಟ್ ಮಾಡುತ್ತಿರುವ ಹೊತ್ತಿನಲ್ಲಿ ಶ್ರೀದತ್ತ ಅದರ ಭಾಗವಾದರು. ಅದೇ ಪರಿಚಯ ಅವರನ್ನು 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾದಲ್ಲಿ ಅವಕಾಶ ಕೊಡಿಸಲೂ ಕಾರಣವಾಯ್ತು. 'ಮ್ಯಾನ್ ಆಫ್ ದಿ ಮ್ಯಾಚ್ ಸಿನಿಮಾದಲ್ಲಿ ನಾನು ಬೇರೆ ಪಾತ್ರ ನಿರ್ವಹಿಸಬೇಕಾಗಿತ್ತು. ಆ ಪಾತ್ರ ಇಷ್ಟೊಂದು ಮಹತ್ವದ್ದಲ್ಲ. ಭೂಷಣ್ ಎಂಬ ಪಾತ್ರವನ್ನು ಮತ್ತೊಬ್ಬರು ಮಾಡಬೇಕಾಗಿತ್ತು. ಆದರೆ ಅವರು ಹಿಂದೆ ಸರಿದರು. ಹಾಗಾಗಿ ಆ ಪಾತ್ರ ನನಗೆ ಸಿಕ್ಕಿತು. ಈಗ ನೋಡಿದರೆ ಹಾಗಾಗಿದ್ದು ನನ್ನ ಅದೃಷ್ಟವೆಂದೇ ಅನಿಸುತ್ತದೆ' ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ ಅವರು.

'ಈ ಸಿನಿಮಾದ ಅನುಭವ ತುಂಬ ಭಿನ್ನವಾದದ್ದು. ಸಾಮಾನ್ಯವಾಗಿ ಒಂದು ಡೈಲಾಗ್ ಹೇಳಿದ ಮೇಲೆ ಕಟ್ ಮಾಡಿ, ಮುಂದಿನ ಡೈಲಾಗ್ ನಂತರ ಹೇಳಿಸುತ್ತಾರೆ. ಇಲ್ಲಿ ಹಾಗಲ್ಲ. ಎರಡು ಮೂರು ಪುಟದ ಇಡೀ ದೃಶ್ಯವನ್ನು ಒಟ್ಟಿಗೇ ಮಾಡಬೇಕಾಗಿತ್ತು. ಒಬ್ಬ ನಟ ಹತ್ತಾರು ನಟ–ನಟಿಯರೊಂದಿಗೆ ಮಾತನಾಡಿ, ರಿಯಾಕ್ಟ್ ಮಾಡಬೇಕಾಗಿತ್ತು. ನಿಜಕ್ಕೂ ಇದೊಂದು ರೀತಿಯಲ್ಲಿ ಸವಾಲಿನ ನಟನೆ. ನನಗೆ ಇಲ್ಲಿಯೂ ಸಹಾಯಕ್ಕೆ ಬಂದಿರುವುದು ರಂಗಭೂಮಿ ಅನುಭವವೇ' ಎನ್ನುವ ಅವರು, ತಮ್ಮ ನಟನೆಗೆ ವ್ಯಕ್ತವಾಗಿರುವ ಪ್ರಶಂಸೆಯಿಂದ ಪುಳಕಿತರಾಗಿದ್ದಾರೆ. ಈ ಕ್ಷೇತ್ರದಲ್ಲಿ ಮುಂದುವರಿಯಬಹುದು ಎಂಬ ನಂಬಿಕೆಯೂ ಅವರಲ್ಲಿ ಹೆಚ್ಚಿದೆ.

ಭಿನ್ನ ರೀತಿಯ ಪಾತ್ರಗಳಲ್ಲಿ ನಟಿಸುವ ಮೂಲಕವೇ ವೃತ್ತಿಬದುಕನ್ನು ಕಟ್ಟಿಕೊಳ್ಳಬೇಕು, ಒಂದೇ ರೀತಿಯ ಪಾತ್ರಕ್ಕೆ ಅಂಟಿಕೊಳ್ಳಬಾರದು ಎಂಬ ನಿಲುವಿನ ಶ್ರೀದತ್ತ, 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾದ ನಂತರ ಇನ್ನಷ್ಟು ಅವಕಾಶಗಳು ತಮ್ಮನ್ನು ಹುಡುಕಿಕೊಂಡು ಬರಲಿವೆ ಎಂಬ ನಂಬಿಕೆಯಲ್ಲಿದ್ದಾರೆ. ಸಿನಿಮಾ ದಾರಿಯಲ್ಲಿ ಎಷ್ಟೇ ಮುಂದಕ್ಕೆ ಹೋದರೂ ರಂಗಭೂಮಿಯ ನಂಟನ್ನು ಮಾತ್ರ ಬಿಡಲಾರೆ ಎಂಬ ಸ್ಪಷ್ಟತೆಯೂ ಅವರಿಗಿದೆ.

'ನಮ್ಮ ನಟನೆಯ ಕೌಶಲವನ್ನು ವೃದ್ಧಿಸಿಕೊಳ್ಳಲು ನಾಟಕ ಹೇಳಿ ಮಾಡಿಸಿದ ಮಾಧ್ಯಮ. ಈಗಲೂ ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಶಿಫ್ಟ್ ಆಗುವಾಗ ನಾನು ಮತ್ತೆ ರಂಗಭೂಮಿಯ ಮೊರೆ ಹೋಗುತ್ತೇನೆ. ಈಗಲೂ ನಾನು ರಂಗಭೂಮಿಯ ನಟನೆ, ಬರವಣಿಗೆ, ನಿರ್ದೇಶನ ಎಲ್ಲದರಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ. ಈ ನಂಟನ್ನು ಮುಂದೆಯೂ ಉಳಿಸಿಕೊಳ್ಳುತ್ತೇನೆ. ಯಾಕೆಂದರೆ ರಂಗಭೂಮಿ ನಮ್ಮ ಬದುಕನ್ನು ಬದಲಿಸುತ್ತದೆ; ಬದುಕನ್ನು ನೋಡುವ ದೃಷ್ಟಿಕೋನವನ್ನೂ ಬದಲಿಸುತ್ತದೆ. ಅದೇ ಜಗತ್ತನ್ನು, ಹೊಸದಾಗಿ, ಇನ್ನಷ್ಟು ಸೂಕ್ಷ್ಮವಾಗಿ ನೋಡಲು ಪ್ರೇರೇಪಿಸುತ್ತದೆ' ಎನ್ನುವ ಶ್ರೀದತ್ತ ಸಿನಿಮಾರಂಗದ ನಡಿಗೆಯಲ್ಲಿ ತಮಗೆ ಸಿಗಲಿರುವ ಮುಂದಿನ ಅವಕಾಶಗಳಿಗಾಗಿ ಕಾತರದಿಂದ ಎದುರು ನೋಡುತ್ತಿದ್ದಾರೆ. ■



## ಮಳೆಗಾಲಕ್ಕೆ ಚಾರ್ಲಿ ಮೊಳಕೆ!

ಹಲವು ದಿನಗಳಿಂದ ಬಿಡುಗಡೆ–ಮುಂದೂಡಿಕೆಯ ಕಣ್ಣಾಮುಚ್ಚಾಲೆಯಾಡುತ್ತಿದ್ದ 'ಚಾರ್ಲಿ 777' ಸಿನಿಮಾ ತೆರೆಗೆ ಬರುವ ಮುಹೂರ್ತ ಕೊನೆಗೂ ಫಿಕ್ಸ್ ಆಗಿದೆ. ಜೂನ್ 10ರಂದು ವಿಶ್ವದಾದ್ಯಂತ ಸಿನಿಮಾ ಬಿಡುಗಡೆಯಾಗುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಟ್ರೇಲರ್ ಸಾಕಷ್ಟು ಸದ್ದು ಮಾಡುತ್ತಿದೆ. ಕಿರಣ್ ರಾಜ್ ನಿರ್ದೇಶನದ ಈ ಸಿನಿಮಾದಲ್ಲಿ ರಕ್ಷಿತ್ ಶೆಟ್ಟಿ ಮುಖ್ಯಪಾತ್ರದಲ್ಲಿದ್ದಾರೆ. ಒಂದು ಮುದ್ದಾದ ನಾಯಿಮರಿಯ ಸುತ್ತ ಹೆಣೆದುಕೊಂಡಿರುವ ಈ ಸಿನಿಮಾ, ಕನ್ನಡದ ಜೊತೆಗೆ ತೆಲುಗು, ತಮಿಳು, ಹಿಂದಿ, ಮಲಯಾಳಂ ಭಾಷೆಗಳಲ್ಲಿ ತೆರೆಗೆ ಬರಲಿದೆ. ಪ್ರತಿಷ್ಠಿತ ಯುಎಫ್‌ಓ ಸಂಸ್ಥೆ ಹಿಂದಿ ಅವತರಣಿಕೆಯ ವಿತರಣೆಯ ಜವಾಬ್ದಾರಿಯನ್ನು ಹೊತ್ತಿರುವುದು ಚಿತ್ರದ ಕುರಿತು ನಿರೀಕ್ಷೆಯನ್ನು ಇನ್ನಷ್ಟು ಹೆಚ್ಚಿಸಿದೆ. ತೆಲುಗಿನಲ್ಲಿ ರಾಣಾ ದಗ್ಗುಬಾಟಿ, ತಮಿಳಿನಲ್ಲಿ ನಿರ್ದೇಶಕ ಕಾರ್ತಿಕ್ ಸುಬ್ಬರಾಜು, ಮಲಯಾಳಂನಲ್ಲಿ ಪೃಥ್ವಿರಾಜ್ ಸುಕುಮಾರನ್ ವಿತರಣೆ ಮಾಡಲಿದ್ದಾರೆ. ರಕ್ಷಿತ್ ಶೆಟ್ಟಿ ಹೋಮ್ ಬ್ಯಾನರ್ ಪರಂವಃ ಸ್ಟುಡಿಯೋಸ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗಿದೆ. 'ಅವನೇ ಶ್ರೀಮನ್ನಾರಾಯಣ'ದಲ್ಲಿ ಕೈಸುಟ್ಟುಕೊಂಡಿದ್ದ ರಕ್ಷಿತ್, ಆ ನಷ್ಟವನ್ನೂ ಸರಿದೂಗಿಸಿಕೊಂಡು ಮುಂದಿನ ಸಿನಿಮಾದ ಬಂಡವಾಳವನ್ನೂ ಕೂಡಿಸಿಕೊಳ್ಳುವಷ್ಟು ಈ ಸಿನಿಮಾದಲ್ಲಿ ಗಳಿಕೆ ಮಾಡುವ ವಿಶ್ವಾಸದಲ್ಲಿದ್ದಾರಂತೆ.






## ಪೆಪೆಯ ಭಿನ್ನ ಬಣ್ಣ

'ಪೆಪೆ' ವಿನಯ್ ರಾಜಕುಮಾರ್ ಅಭಿನಯದ ಹೊಸ ಸಿನಿಮಾ. ಈ ಚಿತ್ರದ ನಿರ್ದೇಶಕ ಶ್ರೀಲೇಶ್ ಎಸ್. ನಾಯರ್ ಗಾಂಧಿನಗರಕ್ಕೆ ಪರಿಚಿತ ಹೆಸರೇನಲ್ಲ. ಆದರೆ ಅವರನ್ನು ಬಲ್ಲ ಸಣ್ಣ ಬಳಗಕ್ಕೆ ಅವರ ಭಿನ್ನ ಪ್ರಯತ್ನಗಳು ಗೊತ್ತು. ಉಳಿದವರಿಗೂ ಅವರ ದೃಶ್ಯ ಶಕ್ತಿಯ ಬಗ್ಗೆ 'ಪೆಪೆ' ಟೀಸರ್ ಮೂಲಕ ಗೊತ್ತಾಗಿದೆ.

ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ 'ಪೆಪೆ' ಟೀಸರ್, ಕಮರ್ಷಿಯಲ್ ಚೌಕಟ್ಟಿನೊಳಗೇ ಹೊಸ ರೀತಿಯ ಸಂವೇದನೆಯನ್ನು ಕಟ್ಟಿಕೊಡುವ ಪ್ರಯತ್ನ ಸ್ಪಷ್ಟವಾಗಿ ಕಾಣಿಸುತ್ತದೆ. 'ಪ್ರೀತಿ, ನೆತ್ತರು ಮತ್ತು ದ್ರೋಹ' ಎಂಬ ಟ್ಯಾಗ್‌ಲೈನ್ ಕೂಡ ಅದಕ್ಕಿದೆ. ಮನಸ್ಸನ್ನು ಕದಡುವ ದೃಶ್ಯಗಳು, ಭಿನ್ನವಾದ ಸಂಯೋಜನೆ ಮತ್ತು ಹಿನ್ನೆಲೆ ಸಂಗೀತ ಈ ಟೀಸರ್‌ನ ಗಮನಾರ್ಹ ಅಂಶಗಳು.

ಸಿನಿಮಾ ಆಯ್ಕೆಯಲ್ಲಿ ಸಾಕಷ್ಟು ಪ್ರಬುದ್ಧರಾಗಿಯೇ ಕಾಣಿಸುವ ವಿನಯ್ ರಾಜ್‌ಕುಮಾರ್ ಅವರಿಗೆ ದೊಡ್ಡದೊಂದು ಕಮರ್ಷಿಯಲ್ ಯಶಸ್ಸು ಮಾತ್ರ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ಆ ಕೊರತೆಯನ್ನು ಈ ಸಿನಿಮಾ ತುಂಬಿಕೊಡಬಹುದು ಎಂಬ ನಿರೀಕ್ಷೆಯನ್ನಂತೂ ಶ್ರೀಲೇಶ್ ಈ ಟೀಸರ್ ಮೂಲಕ ಬಿತ್ತಿದ್ದಾರೆ.

## ತೆರೆಯ ಮೇಲೆ ಕಂಡ್ಹಿಡಿ ನೋಡನ

ಚಿತ್ರ ವಿಚಿತ್ರ ಹೆಸರುಗಳನ್ನು ಇಡುವುದೂ ಸಿನಿಮಾದ ಕುರಿತು ಪ್ರೇಕ್ಷಕನ ಗಮನಸೆಳೆಯುವ ಜನಪ್ರಿಯ ತಂತ್ರ. ಎಸ್.ಕೆ. ನಾಗೇಂದ್ರ ಅರಸ್ ನಿರ್ದೇಶನದ 'ಕಂಡ್ಹಿಡಿ ನೋಡನ' ಸಿನಿಮಾ ಕೂಡ ಈ ಕಾರಣದಿಂದಲೇ ಗಮನಸೆಳೆಯುತ್ತದೆ. ಮೇ 20ರಂದು ತೆರೆಯ ಮೇಲೆ ತನ್ನನ್ನು 'ಕಂಡ್ಹಿಡಿ ನೋಡನ' ಎಂದು ಪ್ರೇಕ್ಷಕರನ್ನು ಆಹ್ವಾನಿಸುತ್ತಿದೆ ಈ ಸಿನಿಮಾ. ಟೈಟಲ್ ನೋಡಿದರೆ ಕಾಮಿಡಿ ಸಿನಿಮಾದಂತೆ ಭಾಸವಾಗುತ್ತದೆ. ಆದರೆ ಸಾಕಷ್ಟು ಭಾವುಕ ಸನ್ನಿವೇಶಗಳೂ ಈ ಚಿತ್ರದಲ್ಲಿವೆಯಂತೆ. ಪ್ರಣವ್ ಸೂರ್ಯ ಮತ್ತು ಪ್ರಿಯಾಂಕ ಜೋಡಿಯಾಗಿ ನಟಿಸಿರುವ ಈ ಸಿನಿಮಾಕ್ಕೆ ಶಶಿಕುಮಾರ್ ಎನ್ನುವವರು ಹಣ ಹೂಡಿದ್ದಾರೆ. ಗಿರಿಜಾ ಲೋಕೇಶ್ ನಾಯಕನ ತಾಯಿಯಾಗಿ ನಟಿಸಿದ್ದಾರಂತೆ. ಶ್ರೀಧರ್ ಕಶ್ಯಪ್ ಸಂಗೀತ, ವಿಶ್ವ ಸಂಕಲನ ಈ ಚಿತ್ರಕ್ಕಿದೆ.

